ತನ್ನ ಮೊಬೈಲನ್ನು ಇಲ್ಲೇ ಬಿಟ್ಟು ಹೋಗಿದ್ದಾನೆ. ಹೇಗೂ ಇನ್ನೊಂದು ವರ್ಷದವರೆಗೂ ಬರೋದಿಲ್ಲ ಅವನು. ಆ ಮೊಬೈಲಿನೊಳಗಿನ ಸಿಮ್ ಕೂಡ ಅವನ ಮುಂಬೈ ಅಡ್ರೆಸ್ಸಿನಲ್ಲಿದೆ. ಸಂಜೆಯವರೆಗೂ ಅವನ ಮೊಬೈಲನ್ನ ಸ್ವಿಚ್‌ಆನ್ ಮಾಡಿ ಇಟ್ಟಿರ್ತೀನಿ. ಆಮೇಲೆ ಆಫ್ ಮಾಡಿ ಎತ್ತಿಟ್ಟರಾಯ್ತು, ಅಷ್ಟೇ...'' ನಾನು ಮಾಲಾಗೆ ಹೇಳಿದೆ.

ತಿಂಡಿ ತಿಂದಾದಮೇಲೆ, ಪ್ರಿಂಟೌಟ್‌ಗಳನ್ನ ಕೈಯಲ್ಲಿ ಹಿಡಿದು ಮತ್ತೆ ಪಾರ್ಕಿನ ಗೇಟಿನಬಳಿ ಬಂದೆ. ವೇಳೆ ಸುಮಾರು 9.30. ತಂದಿದ್ದ ಪ್ರಿಂಟೌಟ್‌ಗಳನ್ನ ಪಾರ್ಕಿನ ಗೇಟಿಗೆ ಮತ್ತು ಅಕ್ಕ ಪಕ್ಕದ ಮರಗಳ ಮೇಲೆ ಅಂಟಿಸಿ, ಯಾರಾದರೂ ಸರವನ್ನು ಹುಡುಕಲು ಬಂದಿರುವರೇನೋ ಎಂದು ಮತ್ತೊಮ್ಮೆ ಪರೀಕ್ಷಿಸಿ, ಮನೆಗೆ ನಡೆದೆ.

ಸಂಜೆ 4 ಗಂಟೆಯವರೆಗೆ ಸುಮಾರು 30 ಕರೆಗಳು ಬಂದವು. ಮೊಬೈಲ್ ಕಳೆದಿದೆ, ಬ್ಯಾಗ್ ಕಳೆದಿದೆ, ವಾಚ್ ಕಳೆದಿದೆ, ಉಂಗುರ ಕಳೆದಿದೆ, ಮಾಂಗಲ್ಯ ಸರ ಕಳೆದಿದೆ, ಹೀಗೆ ಏನೇನೋ ವಸ್ತುಗಳ ವಿಚಾರಣೆ. ಬಹುತೇಕ ಕರೆಗಳು, ನಿಜವಾಗಿಯೂ ಏನಾದರೂ ಕಳೆದುಕೊಂಡವರ ಪ್ರಾಮಾಣಿಕ ಕರೆಗಳಲ್ಲ ಎಂಬುದು ಕರೆ ಮಾಡಿದವರ ಮಾತಿನ ವೈಖರಿಯಿಂದಲೇ ನನಗೆ ಅರ್ಥವಾಯಿತು. ಈ ರೀತಿ ಮಾಡುವುದರಿಂದ ಏನೂ ಉಪಯೋಗವಿಲ್ಲ ಎಂದರಿತ ನಾನು, ಶಶಿಯ ಮೊಬೈಲ್ ಆಫ್ ಮಾಡಿ, ಮರಳಿ ಪಾರ್ಕಿನ ಬಳಿ ಹೋಗಿ, ಅಂಟಿಸಿದ್ದ ಹಾಳೆಗಳನ್ನೆಲ್ಲ ಕಿತ್ತು ಹತ್ತಿರದಲ್ಲೇ ಇದ್ದ ಕಸದ ಬುಟ್ಟಿಯಲ್ಲಿ ಎಸೆದು ಬಂದೆ.

''ಇದು ಮೂರ್ಖರ ಕೆಲಸ ಎಂದು ನಾನು ನಿಮಗೆ ಮೊದಲೇ ಹೇಳಿರಲಿಲ್ಲವೇ? ಇಷ್ಟೆಲ್ಲ ಸಾಹಸ ಮಾಡಿ ಏನು ಉಪಯೋಗವಾಯಿತು? ನಿಮ್ಮ ಮಧ್ಯಾಹ್ನದ ನಿದ್ರೆ ಹಾಳಾಯಿತಷ್ಟೇ...'' ಮಾಲಾ, ಮತ್ತೆ ತನ್ನ ರಾಗ ತೆಗೆದಳು.

''ನಿನ್ನದೇ ಚಿನ್ನದ ವಸ್ತು ಕಳೆದಿದ್ದರೆ ಹೇಗಾಗುತ್ತಿತ್ತೆಂದು ಒಮ್ಮೆ ಯೋಚನೆ ಮಾಡು. ಎಷ್ಟು ಚಡಪಡಿಕೆಯಾಗುತ್ತಿತ್ತಲ್ಲವೇ? ಎರಡು ದಿನ ಅನ್ನ ನೀರು ಸೇರುತ್ತಿರಲಿಲ್ಲ ನಿನಗೆ. ನನ್ನ ಕೈಲಾದ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದೆ. ಸರದ ನಿಜವಾದ ಮಾಲೀಕರು ಸಿಗಲಿಲ್ಲ. ಸರವನ್ನು ಕಳೆದುಕೊಂಡವರಿಗೂ ಅದನ್ನು ಧರಿಸುವ ಯೋಗವಿಲ್ಲವೆಂದು ಕಾಣುತ್ತದೆ. ನಾನು ಕಳೆದುಕೊಂಡಿದ್ದು ಒಂದು ಮಧ್ಯಾಹ್ನದ ನಿದ್ರೆ, ಅಷ್ಟೇ ತಾನೇ? ಪರವಾಗಿಲ್ಲ...''

''ಅದೆಲ್ಲ ಸರಿ, ಈಗ ಇನ್ನೇನು ಮಾಡುವುದು?'' ಮಾಲಾಳದು ಮತ್ತದೇ ಪ್ರಶ್ನೆ.

''ನೀನೇ ಹೇಳಿದೆಯಲ್ಲ, ಸಂಜೆ ಆಂಜನೇಯನ ದೇವಸ್ಥಾನಕ್ಕೆ ಹೋದಾಗ ಹುಂಡಿಗೆ ಹಾಕಿ ಬರೋಣ ಎಂದು. ಅಷ್ಟೇ ಮಾಡಿದರಾಯಿತು...'' ಹೇಳಿದೆ.

ಸಂಜೆ 530ಕ್ಕೆ ದೇವಸ್ಥಾನಕ್ಕೆ ಹೋಗಬೇಕೆಂದುಕೊಂಡವರು, ಮಾಲಾಳ ಸೀರೆಯ ಆಡಂಬರವೆಲ್ಲಾ ಮುಗಿದು, ಮನೆ ಬಿಡುವ ವೇಳೆಗೆ 7 ಗಂಟೆಯಾಗಿತ್ತು. ದೇವಸ್ಥಾನದಲ್ಲಿ ಜನವೋ ಜನ. ಶನಿವಾರ, ಮೇಲಾಗಿ ಹನುಮಜಯಂತಿ. ಪುಟ್ಟಿ ಮತ್ತು ಅವಳ ಅಮ್ಮನನ್ನು ಮಹಿಳೆಯರ ಸಾಲಿನಲ್ಲಿ ಬಿಟ್ಟು, ಅರ್ಚನೆ ಚೀಟಿ ಮಾಡಿಸುವಲ್ಲಿಗೆ ಹೋದೆ. ಅಲ್ಲಿದ್ದವರಿಗೆ, ಸಿಕ್ಕಿರುವ ಚಿನ್ನದ ಸರವೊಂದನ್ನು ಕಾಣಿಕೆ ಸಲ್ಲಿಸಬೇಕೆಂದೂ, ಅದಕ್ಕೇನಾದರೂ ಪ್ರತ್ಯೇಕ ವ್ಯವಸ್ಥೆ ಇದೆಯೇ? ಎಂದು ವಿಚಾರಿಸಿದೆ. ಒಂದು ಚಿಕ್ಕ ಬಟ್ಟೆಯ ಚೀಲವನ್ನು ಕೈಯಲ್ಲಿಟ್ಟು, ಅದರಲ್ಲಿ ಚಿನ್ನದ ಕಾಣಿಕೆಯನ್ನು ಇಟ್ಟು ಹುಂಡಿಯಲ್ಲಿ ಹಾಕಬೇಕೆಂದು ತಿಳಿಸಿ, ಚಿನ್ನದ ಕಾಣಿಕೆ ಸಲ್ಲಿಸಿದ್ದಕ್ಕಾಗಿ ಒಂದು ರಸೀದಿಯನ್ನೂ, ಅರ್ಚನೆಯ ಚೀಟಿಯನ್ನೂ ಕೊಟ್ಟರು. ಪುಟ್ಟಿಯ ಹೆಸರಿನಲ್ಲಿ ಅರ್ಚನೆ ಮಾಡಿಸಿ, ಅವಲಕ್ಕಿಸರವಿದ್ದ ಅರಿವೆಯ ಚೀಲವನ್ನು ಹುಂಡಿಗೆ ಸೇರಿಸಿ,